ನಾಟಕವನ್ನು ಬರೆದುಕೊಳ್ಳಬೇಕು. ಹೀಗೆ ಬರವಣಿಗೆ ನನ್ನ ಬೆನ್ನು ಹತ್ತಿದ್ದು, ಅಥವಾ ನಾನು ಬರವಣಿಗೆಯ ಬೆನ್ನು ಹತ್ತಿದ್ದು. ನೇರವಾಗಿ ನಾಟಕವನ್ನು ಬರೆಯಲು ನನಗೆ ಆಗದು. ಹಾಗಾಗಿ ನಾಟಕಗಳ ಭಾಷಾಂತರ ಅಥವಾ ರೂಪಾಂತರಗಳ ಸಹವಾಸಕ್ಕೆ ಬಿದ್ದೆ. ನಾನು ಬರೆದುಕೊಂಡ ಅಥವಾ ಅನುವಾದಿಸಿದ ಮೊದಲ ನಾಟಕ ಡಾರಿಯೋ ಫೋನ ಒಂದು ಆಕಸ್ಮಿಕ ಸಾವು (**An Accidental Death of An Anarchist**). ತೀರಾ ಕೆಟ್ಟದಾಗಿತ್ತು. ಅದಕ್ಕೊಂದು ಬಂಧವಿರಲಿಲ್ಲ, ಭಾಷೆಯಿರಲಿಲ್ಲ, ಅಚ್ಚುಕಟ್ಟುತನವಿರಲಿಲ್ಲ, ಅಸಲಿಗೆ ಅದರಲ್ಲಿ ಕನ್ನಡವೇ ಇರಲಿಲ್ಲ. ಆದರೆ ನಾಟಕದ ತೀವ್ರತೆ, ನಾಟಕದ ತಂತ್ರದಿಂದ ನಾಟಕ ಯಶಸ್ವಿಯಾಯಿತು. ಅಂದರೆ ನಾನು ಬರೆಯದೇ ಯಾರು ಬರೆದಿದ್ದರೂ ಯಶಸ್ವಿಯಾಗುತ್ತಿತ್ತು. ಜನ ಮೆಚ್ಚಿದ್ದರಿಂದ ಬರೆಯುವ ಸಾಹಸಕ್ಕೆ ತೊಡಗಿದೆ. ನಾಟಕ ಬರೆಯುವ ಅಥವಾ ಬರೆದುಕೊಳ್ಳುವ ಉಮೇದಿತ್ತೇ ಹೊರತು ಕತೆ ಬರೆಯುವ ಗೋಜಿಗೆ ಹೋಗಿರಲಿಲ್ಲ. ಇದಕ್ಕೂ ಮೊದಲು ಕತೆಗಳ ಹೆಸರಿನಲ್ಲಿ ಒಂದಿಷ್ಟು ಗೀಚಾಟ ನಡೆದಿತ್ತು. ಕಲ್ಪಿಸಿ ಬರೆದ ಕತೆಗಳಾದ್ದರಿಂದ ದಶದಿಕ್ಕುಗಳಿಗೂ ಹರಡಿಕೊಂಡಿದ್ದವು. 'ಕುರುವಿನ ಗುಲಾಮ' ಪ್ರಕಟವಾದ ನಂತರ ನನ್ನ ಕತೆಗಳಿಗೆ ಒಂದು ಪರಿಸರ ಸಿಕ್ಕಿತು.

ಒಂದು ಕಾಲದ ಚೌಕಟ್ಟು ದೊರಕಿತು. ಮುಂದಿನ ಕತೆಗಳಿಗೆ ಪ್ರಸ್ತಾವನೆ ದೊರಕಿತು.

ಸಾಮಾನ್ಯವಾಗಿ ಕತೆಗಳು ಹುಟ್ಟುವುದು ಘಟನೆಗಳಿಂದ–ಕೇಳಿದ್ದಾಗಿರಬಹುದು, ನೋಡಿದ್ದಾಗಿರಬಹುದು, ಓದಿದ್ದಾಗಿರಬಹುದು – ಎಂದೇ ನನ್ನ ನಂಬಿಕೆ. ಆದರೆ ನನ್ನ ಕತೆಗಳು ಹುಟ್ಟುವುದು ಪಾತ್ರಗಳಿಂದ. ಕತೆ ಬರೆಯುವ ಮೊದಲು ನನಗೆ ಪಾತ್ರಗಳು ಹೊಳೆಯಬೇಕು. ಅವು ನನ್ನ ಮುಂದೆ ನಡೆದಾಡಿದ, ನನ್ನ ಪರಿಸರದಲ್ಲೆಲ್ಲೋ ಬದುಕಿದ, ನನ್ನೊಡನೆ ಒಡನಾಡಿದ ಪಾತ್ರಗಳಾಗಿರಬೇಕು. ನಂತರ ಆ ಪಾತ್ರಗಳ ಚರಿತ್ರೆ ನನಗೆ ಸ್ಪಷ್ಟವಾಗಬೇಕು, ಅಂದರೆ ಆ ಪಾತ್ರಗಳ ಪರಿಸರ, ಆ ಪಾತ್ರಗಳ ದಾಂಪತ್ಯ ಅಥವಾ ಒಂಟಿ ಜೀವನ, ಆ ಪಾತ್ರಗಳ ಬದುಕು, ಅವುಗಳ ಅಭ್ಯಾಸಗಳು, ತೊಳಲಾಟ, ದ್ವಂದ್ವಗಳು, ಇಡುಕುಗಳು ಎಲ್ಲವೂ ನನಗೆ ಸ್ಪಷ್ಟವಾಗಬೇಕು.

ಉದಾಹರಣೆ ಕೊಡುತ್ತೇನೆ. ನಾನು ಮುಂದೆಂದೋ ಬರೆಯಬಹುದಾದ ಒಂದು ಕತೆಯ ಆರಂಭ ಹೀಗಿದೆ:

*ಬಸವನ ಹುಳಕ್ಕಿಂತಾ ಸಾವಧಾನಿ, ನಿರುಪದ್ರವಿ ಜೀವಿ ಈ ಜಗತ್ತಿನಲ್ಲಿ ಯಾರಾದರೂ ಇದ್ದರೆ ಅದು ತಗಡೂರು ಗುರುಮೂರ್ತಿ. ಇವರು ಓಡಿ ಹೋಗಿ ಬಸ್ ಹತ್ತಿದ್ದನ್ನಂತೂ ಯಾರೂ ನೋಡಿಲ್ಲ. ಇವರು ಬಸ್ ಹತ್ತಬೇಕೂ ಅಂದರೆ ಬಸ್ ಪೂರ್ತಿ ನಿಲ್ಲಬೇಕು. ಗಾಲಿ ಒಂದಿಂಚೇ ಅಲ್ಲಾಡಿದರೂ ಮತ್ತೆ ಫುಟ್‌ಪಾತಿಗೆ ಇಳಿದುಬಿಡುತ್ತಾರೆ. ಇವರು ಬಸ್ ಹತ್ತುವಾಗ ಹಿಂದಿನಿಂದ ಯಾರೂ ನೂಕಬಾರದು. ಸರತಿಯಲ್ಲಿ ಯಾರೇ ಹಿಂದಿದ್ದರೂ ಅವರಿಗೆ ಜಾಗ ಮಾಡಿಕೊಟ್ಟು ತಾವು ಹಿಂದೆ ನಿಂತುಬಿಡುತ್ತಾರೆ. ಯಾವತ್ತೂ ಸರತಿಯಲ್ಲಿ ಇವರೇ ಕೊನೆ ಗಿರಾಕಿ. ಇದೇ ಬಸ್ಸಿನಲ್ಲಿ ಹೋಗಬೇಕೂಂತ ನಿಯಮವೇನೂ ಇಲ್ಲ ಅವರಿಗೆ. ಬಸ್‌ಸ್ಟಾಪಿನಲ್ಲಿ ಯಾವ ಹೊತ್ತಿನಲ್ಲಿ ಜನಜಂಗುಳಿ ಇರುವುದಿಲ್ಲವೋ, ಯಾವ ಬಸ್ಸಿಗೆ ದೊಡ್ಡ ಸಾಲು ಇಲ್ಲವೋ ಅಂತ ಹೊತ್ತಿನಲ್ಲಿ ಮತ್ತು ಅಂತಹ ಬಸ್ಸಿನಲ್ಲಿ ಹತ್ತಿ ಕೂಡುತ್ತಾರೆ. ಹಾಗಾಗಿ ಇದೇ ಗುರಿಯೆಂಬ ಪ್ರಶ್ನೆಯೂ ಇವರಿಗಿಲ್ಲ. ಬಸ್ಸು ಬಿಟ್ಟಲ್ಲಿ ಇಳಿದು ಮತ್ತೆ ಅಲ್ಲಿಂದ ಮತ್ತೊಂದು ಬಸ್ ಹತ್ತಿ ತಮ್ಮ ಗುರಿ ಮುಟ್ಟಲು ಪ್ರಯತ್ನಿಸುತ್ತಾರೆ. ರಸ್ತೆ ದಾಟುವಾಗಲೂ ಅಷ್ಟೇ, ಕೇಸರಿ ದೀಪ ಇರುವಾಗ ಇವರು ರಸ್ತೆ ದಾಟಿದ್ದೇ ಇಲ್ಲ. ದೀಪಗಳು*